# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **568 (483)**

**ಸದಸ್ಯರ ಹೆಸರು** : **ಶ್ರೀ ಬಿ.ಜಿ.ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ** : **20.08.2026**

**ಉತ್ತರಿಸಬೇಕಾದ ಸಚಿವರು** : **ನಗರಾಭಿವೃದ್ಧಿ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ನಗರದಲ್ಲಿನ ರೈಲ್ವೆ ಕೆಳಸೇತುವೆಗಳ ಅವೈಜ್ಞಾನಿಕ ಕಾಮಗಾರಿ ಮತ್ತು ಸೂಕ್ತ ನಿರ್ವಹಣೆ ಕೊರತೆಯಿಂದ ಪಾದಚಾರಿಗಳು, ವಾಹನ ಸವಾರರು ಪರದಾಡುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ: | ಕಲಬುರಗಿ ನಗರದಲ್ಲಿ ರೈಲ್ವೆ ಟ್ರ್ಯಾಕ್ (ಮುಂಬೈ ಬೆಂಗಳೂರು ಮಾರ್ಗ ಮತ್ತು ದೆಹಲಿ-ಬೆಂಗಳೂರು ಮಾರ್ಗ) ಸುಮಾರು ವರ್ಷಗಳ ಹಿಂದೆಯೇ ನಿರ್ಮಿಸಲಾಗಿರುತ್ತದೆ. |
| (ಆ) | ನಗರದ ಶಕ್ತಿನಗರ, ಬಿದ್ದಾಪುರ ಕಾಲೋನಿ ಮಧ್ಯ ಹಾದು ಹೋಗಿರುವ ರೈಲ್ವೆ ಮಾರ್ಗದಲ್ಲಿ ನಿರ್ಮಿಸಲಾದ ರೈಲ್ವೆ ಕೆಳ ಸೇತುವೆಯಲ್ಲಿ ಚರಂಡಿ ನೀರು ಸಂಗ್ರಹವಾಗಿ ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿದ್ದು, ಚರಂಡಿ ನೀರು ಹರಿಯುವ ಪೈಪ್ ಬೇರೆಡೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದೇ: (ವಿವರ ನೀಡುವುದು) | ಶಕ್ತಿನಗರ, ಬಿದ್ದಾಪುರ ಕಾಲೋನಿ ಹಾಗೂ ಇತರೆ ಕಾಲೋನಿಗಳು ಬೆಳೆಯುತ್ತಿದ್ದು, ಸದರಿ ಕಾಲೋನಿಗಳ ಚರಂಡಿ ನೀರು ರೈಲ್ವೆ ಕೆಳಸೇತುವೆಗಳ ಮೂಲಕ ಹರಿಯುತ್ತಿದ್ದು, ಚರಂಡಿ ನಿರ್ಮಿಸಲು ಈ ಹಿಂದೆ ರೈಲ್ವೆ ಇಲಾಖೆಯು ಅನುಮತಿಸಿರುವುದಿಲ್ಲ.<br><br>ದಿನಾಂಕ: 27.05.2026 ರಂದು ಮಹಾನಗರ ಪಾಲಿಕೆ ಮತ್ತು ರೈಲ್ವೆ ಇಲಾಖೆ ವತಿಯಿಂದ ಜಂಟಿ ಸ್ಥಳ ಪರಿಶೀಲನೆ ಮಾಡಲಾಗಿದ್ದು, ಪ್ರಸ್ತುತ ಚರಂಡಿ ನಿರ್ಮಿಸಲು ಒಪ್ಪಿರುತ್ತಾರೆ.<br><br>ಸದರಿ ಚರಂಡಿ ಕಾಮಗಾರಿಯನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಡಿಯಲ್ಲಿ ರೂ.500.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ.<br><br>ಸದರಿ ಕಾಮಗಾರಿ ಕೈಗೊಳ್ಳಲು ದಿನಾಂಕ:05.12.2025 ರಂದು ಟೆಂಡರ್ ಪ್ರಕಟಣೆ ಹೊರಡಿಸಲಾಗಿರುತ್ತದೆ. ದಿನಾಂಕ:18.06.2026 ರಂದು ಗುತ್ತಿಗೆದಾರರಾದ ಶ್ರೀ ನಾರಾಯಣ್ ರಾವ್ ವಿಠ್ಠಲ್ ರಾವ್ ಕುಲಕರ್ಣಿ, ಎನ್.ವಿ. ಕುಲಕರ್ಣಿ ಕನ್ಸ್ಟ್ರಕ್ಷನ್ ಕಂಪನಿ, ವಿಜಯಪುರ ಇವರಿಗೆ ಕಾರ್ಯಾದೇಶ ನೀಡಲಾಗಿದೆ.<br><br>ಸದರಿ ಕಾಮಗಾರಿಯನ್ನು ಡಿಸೆಂಬರ್ 2026ರ ವೇಳೆಗೆ ಮುಕ್ತಾಯಗೊಳಿಸಲು ಪಾಲಿಕೆ ವತಿಯಿಂದ ಗುತ್ತಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. |

| | | |
|---|---|---|
| (ಇ) | ಕಲಬುರಗಿ ನಗರದಲ್ಲಿರುವ ರೈಲ್ವೆ ಕೆಳ ಸೇತುವೆಗಳಲ್ಲಿ ಸರಾಗವಾಗಿ ನೀರು ಹರಿದು ಹೋಗಲು ಚರಂಡಿಗಳನ್ನು ನಿರ್ಮಿಸಿ ಅಗತ್ಯ ಕ್ರಮ ಕೈಗೊಳ್ಳುವಲ್ಲಿ ವಿಫಲವಾದ ಅಧಿಕಾರಿಗಳ ವಿರುದ್ಧ ಯಾವ ಕ್ರಮಕೈಗೊಂಡಿದೆ? | ರೈಲ್ವೆ ಕೆಳ ಸೇತುವೆಗಳು ರೈಲ್ವೆ ಇಲಾಖೆಯ ಸರಹದ್ದಿನಲ್ಲಿದ್ದು, ಈ ಹಿಂದೆ ಯಾವುದೇ ಕ್ರಮ ಜರುಗಿಸಲು ಅನುಮತಿಸದ ಕಾರಣ, ರೈಲ್ವೆ ಇಲಾಖೆಯ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸಿ ದಿನಾಂಕ:27.05.2026 ರಂದು ಜಂಟಿ ಸ್ಥಳ ಪರಿಶೀಲನೆ ಮಾಡಿ ರೈಲ್ವೆ ಇಲಾಖೆಯ ಕೆಳ ಸೇತುವೆ ಸರಹದ್ದಿನಲ್ಲಿ ಚರಂಡಿ ನಿರ್ಮಿಸಲು ಅನುಮತಿ ಪಡೆದುಕೊಳ್ಳಲಾಗಿದ್ದು, ಹಾಗೂ ಸದರಿ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ನಅಇ 101 ಎಸಿಜಿ 2026 (ಇ)

(ಡಾ. ಯತೀಂದ್ರ ಸಿದ್ದರಾಮಯ್ಯ)
ನಗರಾಭಿವೃದ್ಧಿ ಸಚಿವರು